Chikkakere of Sulibele, Hoskote Taluk (Repairs).

Q.—592. Srimathi LAKSHMIDEVI RAMANNA (Hoskote-Anekal).—

Will the Government be pleased to state :—

(*a*) when the estimate for repairing the Chikkakere of Sulibele village in Hoskote Taluk was prepared ;

(*b*) the reasons for the delay in taking up the abovesaid tank work ?

A.—Sri H. M. CHANNABASAPPA (Minister for Industries).—

(*a*) In 1952.

(*b*) Several alternative proposals are being examined and the estimate has still to be finalised.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—(ಬಿ) ಪ್ರಶ್ನೆಗೆ ಉತ್ತರವಾಗಿ ಅನೇಕ ಬೇರೆ ಬೇರೆ ಅಂದಾಜುಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಹೇಳಿದ್ದೀರಿ. ಈ ಅಂದಾಜಿನ ಪರಿಶೀಲನೆ ಯಾರ ಸಲಹೆಮೇಲೆ ನಡೆದದ್ದು ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ನಿನ್ನೆ ದಿವಸ ಬೇರೆ ಒಂದು ಪ್ರಶ್ನೆ ಬಂದಾಗ ಇದೇ ವಿಷಯದ ಮೇಲೆ ಉತ್ತರ ಕೊಡ್ಜೆ. ಎರಡು ಅಂದಾಜುಗಳು ತಯಾರಾಗಿವೆ. ಒಂದಕ್ಕೆ 40 ಸಾವಿರ ರೂಪಾಯಿ ಕಾಂಪೆಕ್ಟ್ ಸೇಫ್ಟ್ ಕೊಡಬೇಕೆಂದು ವ್ಯವಸ್ಥೆಮಾಡಿದ್ದೇವೆ. 40 ಸಾವಿರ ರೂಪಾಯಿ ಕಾಂಪೆಕ್ಟ್‌ಸೇಫ್ಟ್ ಕೊಡುವುದರ ಜೊತೆಗೆ ಆ ಜಮೀನಿನ ಮಣ್ಣು ತೆಗೆದು ಅದರ ಎತ್ತರ ಹೆಚ್ಚಿಸಿದರೆ ಮುಳುಗಡೆ ಆಗುವುದು ಕಮ್ಮಿ ಆಗುತ್ತದೆ ಎಂದು ಅಂದಾಜುಮಾಡಿದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಈಗಾಗಲೇ ನಾಲ್ಕು ವರ್ಷಗಳಿಂದ ಪರಿಶೀಲನೆಯಲ್ಲಿದೆ. ಆಫೀಸರು ತೀರ್ಮಾನ ತೆಗೆದುಕೊಳ್ಳಲಿಕ್ಕೆ ಇನ್ನು ಎಷ್ಟು ವರ್ಷ ಬೇಕಾಗುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಉತ್ಪತ್ತಿ ಎಷ್ಟು ಬರುತ್ತದೆ, ರೈತರು ಎಷ್ಟು ಕಾಂಟ್ರಿಬ್ಯೂಷನ್ ಕೊಡುತ್ತಾರೆ ಎನ್ನುವುದರಮೇಲೆ ಹೋಗುತ್ತದೆ. ಈಗಿರುವ ರೀತ್ಯಾ ಶೇಕಡ 1·8 ಬರುತ್ತದೆ ಎಂದು ನಿರ್ಧಾರವಾಗಿದೆ. ಇನ್ನೂ ಸ್ವಲ್ಪ ಹೆಚ್ಚಿಗೆ ಬಂದರೆ ಬೇಗ ಸಹಾನು ಭೂತಿಯಿಂದ ಪರಿಶೀಲನೆ ಮಾಡುವುದಕ್ಕೆ ಅವಕಾಶ ವಾಗುತ್ತದೆ.

Sri A. V. NARASIMHA REDDY.—What is the estimated cost of desilting ?

Sri H. M. CHANNABASAPPA.—Desilting will cost about Rs. 3.16 lakhs.

Sri A. V. NARASIMHA REDDY.—For repairing the tank ?

Sri H. M. CHANNABASAPPA.—To improve the capacity of the tank it will cost Rs. 1.09 lakhs.

Sri A. V. NARASIMHA REDDY.—Which is more remunerative ?

Sri H. M. CHANNABASAPPA.—Naturally the second one.

Sri A. V. NARASIMHA REDDY.—Therefore, in view of the remunerativeness of the tank. . . .

Sri H. M. CHANNABASAPPA.—I said comparatively it is advantageous.

Sri A. V. NARASIMHA REDDY.—What is the extent of atchkat under cultivation below this tank ?

Sri H. M. CHANNABASAPPA.—About 432 acres.

Sri A. V. NARASIMHA REDDY.—When so much extent of land is under cultivation, such a tank has not received your immediate attention ?

Sri H. M. CHANNABASAPPA.—Because it has deserved our consideration, we have been trying to find out ways and means of improving it.

Second Five-Year Plan (Bridges and Culverts to be constructed in Bangalore District).

Q.—498. Sri D. M. GOVINDARAJU (Nelamangala).—

Will the Government be pleased to state :—

the names of culverts and bridges proposed to be constructed in Bangalore District under the Second Five-Year Plan (talukwar details to be furnished) ?

A.—Sri H. M. CHANNABASAPPA (Minister for Industries).—

The programme has yet to be finalised.

ಶ್ರೀ ಡಿ. ಎಂ. ಗೋವಿಂದರಾಜು.—ಇದರ ವಿಚಾರದಲ್ಲಿ ಆಫೀಸರಾಗಿ ಏನು ಕ್ರಮ ತೆಗೆದುಕೊಂಡಿದ್ದೀರಿ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಅದರ ವಿವರಗಳನ್ನು finalise ಮಾಡಬೇಕು ಎಂದು ಹೇಳಿದೆ. ಈಗ ಸ್ವಲ್ಪ ಹೆಚ್ಚು ಕಡಿಮೆ ನಮ್ಮ final target fix ಆಗಿದೆ. ಇನ್ನೂ ಮುಂದೆ ವಿವರಗಳನ್ನು finalise ಮಾಡುತ್ತೇವೆ.

ಶ್ರೀ ಡಿ. ಎಂ. ಗೋವಿಂದರಾಜು.—ಪ್ರತಿ ಜಿಲ್ಲೆಯಿಂದಲೂ ಆಯಾ ಡೆಪ್ಯುಟಿ ಕಮೀಷನರುಗಳಿಂದ ರಿಪೋರ್ಟ್ ತರಿಸಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಡೆಪ್ಯುಟಿ ಕಮೀಷನರು ಗಳಿಂದ ರಿಪೋರ್ಟ್ ಬರಬೇಕಾಗಿಲ್ಲ. ಎಲ್ಲೆಲ್ಲಿ ಏನೇನು ಮಾಡಬೇಕು ಎನ್ನುವುದರ ಪಟ್ಟಿ ನಮ್ಮ ಮುಂದೆ ಇದೆ.

ಶ್ರೀ ಡಿ. ಎಂ. ಗೋವಿಂದರಾಜು.—ಅವುಗಳ ಹೆಸರು ಹೇಳುತ್ತೀರಾ ?